॥ ಪ್ರಸೀದತು ಶ್ರೀ ವೀರಾಂಜನೇಯ ॥

ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಹೇಮಪುರ ಮಹಾಪೀಠಮ್



## ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ(ರಿ.)

## ಶ್ರೀಕ್ಷೇತ್ರ ಬಂಗಾರಮಕ್ಕಿ



ಪೋ-ಗೇರಸೊಪ್ಪ, ತಾ ಹೊನ್ನಾವರ, ಉತ್ತರಕನ್ನಡ ಜಿಲ್ಲೆ 581384

# ಪ್ರತಿಷ್ಠಾ ಮಹೋತ್ಸವ ಹಾಗೂ ಜಾತ್ರಾ ಮಹೋತ್ಸವ



2025 ಮಾರ್ಚ 31 ರಿಂದ
ಏಪ್ರಿಲ್ 13 ರ ವರೆಗೆ.



## ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ 2025 ಹಾಗೂ ಶ್ರೀ ಗುರೂಜಿಯವರ ಪೀಠಾರೋಹಣದ ರಜತ ಮಹೋತ್ಸವದ

## ಆಮಂತ್ರಣ

ತೆರೆದ - ಅಂಚೆ

ಗೆ ..............................................................

..............................................................

..............................................................

..............................................................

ಸರ್ವರಿಗೂ ಆದರದ ಸ್ವಾಗತ

| | | |
|---|---|---|
| ಮಾರ್ಚ 31 | : | ಧಾರ್ಮಿಕ ಕಾರ್ಯಕ್ರಮಗಳ ಪ್ರಾರಂಭ |
| ಏಪ್ರಿಲ್ 3 | : | ಶ್ರೀ ವೀರಾಂಜನೇಯ ದೇವರ ಪ್ರತಿಷ್ಠೆ<br>ಸ್ವರ್ಣಕಲಶ ಪ್ರತಿಷ್ಠೆ, ಶ್ರೀಮಹಾಗಣಪತಿ ಪ್ರತಿಷ್ಠೆ<br>ಶ್ರೀ ಸುಬ್ರಹ್ಮಣ್ಯ ಪ್ರತಿಷ್ಠೆ (ನಾಗಬನದಲ್ಲಿ)<br>ಶ್ರೀ ಚೌಡೇಶ್ವರೀ ಪ್ರತಿಷ್ಠೆ, ನವಗ್ರಹ ಪ್ರತಿಷ್ಠೆ |
| ಏಪ್ರಿಲ್ 4 | : | ಪುಷ್ಪ ರಥೋತ್ಸವ |
| ಏಪ್ರಿಲ್ 5 | : | ಬ್ರಹ್ಮ ರಥೋತ್ಸವ |
| ಏಪ್ರಿಲ್ 6 | : | ಶ್ರೀರಾಮ ನವಮಿ |
| ಏಪ್ರಿಲ್ 7, 8, 9 | : | ಶರಾವತಿ ಕುಂಭ |
| ಏಪ್ರಿಲ್ 7 | : | ಶರಾವತಿ ಆರತಿ |
| ಏಪ್ರಿಲ್ 11 | : | ಪುಷ್ಪ ರಥೋತ್ಸವ |
| ಏಪ್ರಿಲ್ 12 | : | ಹನುಮ ಜಯಂತಿ ಹಾಗೂ<br>ಮಹಾಸ್ಯಂದನ ಬ್ರಹ್ಮ ರಥೋತ್ಸವ |

**ಏಪ್ರಿಲ್ 6 ರಿಂದ 12 :**

**ಸಂಸ್ಕೃತಿ ಕುಂಭ–ಮಲೆನಾಡ ಉತ್ಸವ 2025 ಹಾಗೂ ಶ್ರೀ ಗುರೂಜಿಯವರ ಪೀಠಾರೋಹಣದ ರಜತ ಮಹೋತ್ಸವ**







## ಪ್ರಿಯ ಭಕ್ತರೇ,

ವೇದ, ಶಾಸ್ತ್ರ – ಆಗಮಗಳು ಲೋಕದಲ್ಲಿ ಭಗವಂತನಿಂದ ನಿಶ್ವಸಿತವಾಗಿ ಜ್ಞಾನಿಗಳಾದ ಋಷಿ ಪರಂಪರೆಯ ದಿವ್ಯದೃಷ್ಟಿಗೆ ಗೋಚರಿಸಿದವು. ಇವು ಲೋಕದಲ್ಲಿ ಭಗವಂತನ ಆರಾಧನೆಗೆ ಬೇಕಾದ ಕಾಲ–ದ್ರವ್ಯ–ಮಾನ–ಪೂಜಾನುಷ್ಠಾನಗಳ ಮಹತ್ವವನ್ನು ಸಾರುತ್ತ ಭಗವಂತನ ಸಾಕ್ಷಾತ್ಕಾರಕ್ಕೆ, ಮೋಕ್ಷ ಸಾಧನಕ್ಕೆ ಕಾರಣವಾಗುತ್ತವೆ. ಆಗಮ ಶಾಸ್ತ್ರ ವಾಕ್ಯಗಳಂತೆ, ವೇದ ಮಂತ್ರಗಳ ನಿಯಮದಂತೆ ಭಗವಂತನ ಚಲನಗಳಿರುತ್ತವೆ. ಅದನ್ನೇ **"ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಂತು ದೈವತಂ"** ಎಂದು ಹೇಳಿದ್ದಾರೆ, ಭಗವಂತನು ಮಂತ್ರಸ್ವರೂಪನೂ ಮಂತ್ರಮೂರ್ತಿಯೂ ಆಗಿದ್ದಾನೆ, ಕಲಿಯುಗ ಬ್ರಹ್ಮನಾದ, ರಾಮ ಸೇವಾ ದುರಂಧರನಾದ, ಭಕ್ತೋದ್ಧಾರಕನಾದ, ಕ್ಷಿಪ್ರ ಪ್ರಸಾದದಾಯಕನಾದ, ಶ್ರೀ ವೀರಾಂಜನೇಯನ ದೇವಾಲಯದ ನವೀಕರಣ ಕಾರ್ಯವನ್ನು ಆಗಮಶಾಸ್ತ್ರ ಶಾಸನದಂತೆ ಲೋಕ–ಕ್ಷೇಮಕ್ಕಾಗಿ ಸಂಕಲ್ಪಿಸಿದ್ದೇವೆ.

**ಯತ್ನೈವ ದೇವ ಪೂಜಾಯೇ ವಿನಿಯುಕ್ತಂ ಅನಿಂದಿತಂ ||**
**ದ್ರವ್ಯ ಪುಷ್ಪಾದಿಕಂ ಪಶ್ಚಾತ್ ನಿರ್ಮಾಲ್ಯಂ ಇತಿ ನಿಂದ್ಯತೇ||**
**ಏವಂ ಬಿಂಬಮದುಷ್ಟಂ ಯತ್ ಪೂಜಾಯಾಂ ವಿನಿಯುಜ್ಯತೇ|**
**ತದ್ದೈವದೂಷಿತಂ ಪಶ್ಚಾತ್ ನಿರ್ಮಾಲ್ಯಂ ಇತಿ ನಿಂದ್ಯತೇ||**

ಆಲಯ, ಶಿಖರ, ಅಷ್ಟಬಂಧಗಳು ಜೀರ್ಣವಾದ ಕಾಲಕ್ಕೆ ಅದನ್ನು ವಿಸರ್ಜಿಸಿ ಪುನಃ ನೂತನವಾಗಿ ನಿರ್ಮಿಸಬೇಕೆಂಬುದು ಶಾಸ್ತ್ರ ವಾಕ್ಯ. ಅಂತೆಯೇ ಶ್ರೀ ವೀರಾಂಜನೇಯ ದೇವರ ಪರಿವಾರ ಶ್ರೀ ಮಹಾಗಣಪತಿ – ಶ್ರೀ ಸುಬ್ರಹ್ಮಣ್ಯ – ಶ್ರೀ ಚೌಡೇಶ್ವರೀ ಹಾಗೂ ಶ್ರೀ ವೀರಾಂಜನೇಯ ದೇವರ ಶಿಖರ ಕಲಶವನ್ನು ಪುನಃ ನಿರ್ಮಾಣ ಮಾಡಿ ಪ್ರತಿಷ್ಠಾಪಿಸಲು ಸಂಕಲ್ಪಿಸಿ, ದೇವರ ಆಣತಿಯಂತೇ ಕಾರ್ಯ ಆರಂಭಗೊಳಿಸಿದ್ದೇವೆ.

"ಕಿಯಂತ ಕಾಲಮತ್ರೇಶ ಪ್ರವಾಸ ವಸತಿಂ ವಸೇತ?" ಎಂಬ ಪ್ರಶ್ನೆಗೆ ಶ್ರೀ ದೇವರ ಆಣತಿಯಂತೇ ನಾವು 6 ಮಾಸ ಅವಧಿ ಪಡೆದು ಪುನಃ ಶ್ರೀದೇವರನ್ನು ನೂತನ ಶಿಖರದೊಂದಿಗೆ ಪ್ರತಿಷ್ಠಾಪಿಸುತ್ತೇವೆ ಎಂದು ಭಕ್ತರೆಲ್ಲರ ಪರವಾಗಿ "ಸ್ಥಾಪಯಾಮೋ ವಯಂಸತ್ಯಂ ತತ್ ಅನುಜ್ಞಾತುಮರ್ಹಥ" ಎಂಬ ಶಾಸ್ತ್ರ ವಾಕ್ಯದಂತೆ ಪ್ರತಿಜ್ಞಾಬದ್ಧರಾಗಿದ್ದೇವೆ.

ಶ್ರೀ ವೀರಾಂಜನೇಯನು ಸರ್ವ ಭಕ್ತರ ಸಕಲ ಸಂಕಷ್ಟ ಪರಿಹರಿಸಿ ಸರ್ವ ಭಕ್ತರನ್ನು ಪಾಲಿಸಿ ಸಲಹುತ್ತ ಬಂದಿದ್ದು, ವೀರಾಂಜನೇಯನು ತನ್ನ ಪ್ರತಿಷ್ಠಾಪನಾದಿ ಈ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಲು ನಮ್ಮನ್ನೆಲ್ಲರನ್ನೂ ತನ್ನ ಸನ್ನಿಧಿಗೆ ಆಮಂತ್ರಿಸುತ್ತಿದ್ದಾನೆ.

ಆದಕಾರಣ ಶ್ರೀ ಶಾಲಿವಾಹನ ಗತಶಕ 1947 ವಿಶ್ವಾವಸು ಸಂವತ್ಸರ ಚೈತ್ರ ಶುದ್ಧ ದ್ವಿತೀಯ ಸೋಮವಾರ ತಾ. 31–03–2025 ರಿಂದ ತಾ. 06–04–2025 ಚೈತ್ರ ಶುದ್ಧ ನವಮಿ ರವಿವಾರದವರಗೆ ಶ್ರೀಕ್ಷೇತ್ರ ಬಂಗಾರಮಕ್ಕಿಯಲ್ಲಿ **ಶ್ರೀ ವೀರಾಂಜನೇಯ ದೇವರ ಪುನಃ ಪ್ರತಿಷ್ಠೆ, ನೂತನ ಶಿಖರದಲ್ಲಿ ಸ್ವರ್ಣ ಕಲಶ ಪ್ರತಿಷ್ಠೆ, ಶ್ರೀ ಮಹಾಗಣಪತಿ, ಶ್ರೀ ಸುಬ್ರಹ್ಮಣ್ಯ (ನಾಗಬನ), ಶ್ರೀ ಚೌಡೇಶ್ವರೀ ಪ್ರತಿಷ್ಠೆ, ನವಗ್ರಹ ಸ್ಥಾಪನೆ** ಈ ಪ್ರತಿಷ್ಠಾ ಕಾರ್ಯಗಳ ಅಂಗವಾಗಿ ಚತುರ್ವೇದ ಪಾರಾಯಣ, ಗಾಯತ್ರೀ ಹವನ, ಚತುರ್ದ್ರವ್ಯಾತ್ಮಕ ಗಣಪತಿ ಅಥರ್ವಶೀರ್ಷ ಹವನ, ಶತಚಂಡೀ ಹವನ, ಪುರುಷ ಸೂಕ್ತಾತ್ಮಕ ಅತಿವಿಷ್ಣು ಹವನ, ಮಹಾರುದ್ರ ಹವನ, ಆಂಜನೇಯ ಮೂಲಮಂತ್ರ ಹವನ, ಪವಮಾನ ಹವನ, ಸಹಸ್ರ ಬ್ರಹ್ಮ ಕಲಶಾಭಿಷೇಕ, ಪ್ರತಿಷ್ಠಾಂಗ ಮಹಾರಥೋತ್ಸವ ಹಾಗೂ 06–04–2025 ರವಿವಾರ ಚೈತ್ರ ಶುದ್ಧ ನವಮಿ–ಶ್ರೀರಾಮ ನವಮಿಯಿಂದ ಚೈತ್ರ ಶುದ್ಧ ಹುಣ್ಣಿಮೆ ತಾ: 12–04–2025 ಶನಿವಾರ ಹನುಮ ಜಯಂತಿಯವರೆಗೆ ವರ್ಷಂಪ್ರತಿ ನಡೆಯುವ ಉತ್ಸವದ ಅಂಗವಾಗಿ ಪ್ರತಿದಿನ ರಾಮತಾರಕ ಹವನ, ಆಂಜನೇಯ ಮೂಲಮಂತ್ರ ಹವನ, ಸುಂದರಕಾಂಡ ಪಾರಾಯಣ, ರುದ್ರ ಪಾರಾಯಣ, ಸತ್ಯಮಾರುತಿ ವೃತ, ಮಹಾರುದ್ರ ಹವನ, ಅಹೋರಾತ್ರಿ ಭಜನೆ, 11–04–2025 ಶುಕ್ರವಾರದಂದು ಶ್ರೀ ವೀರಾಂಜನೇಯ ದೇವರ ಪುಷ್ಪ ರಥೋತ್ಸವ, 12–04–2025 ಶನಿವಾರ ಹನುಮ ಜಯಂತಿ ದಿನದಂದು ಸತ್ಯ ಮಾರುತಿ ವೃತ ಹಾಗೂ ಮಹಾರುದ್ರ ಹವನದ ಪೂರ್ಣಾಹುತಿಯೊಂದಿಗೆ ಶ್ರೀ ವೀರಾಂಜನೇಯ ದೇವರ "ಮಹಾಸ್ಯಂದನ ಬ್ರಹ್ಮರಥೋತ್ಸವ" ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾದ ಪರಮಪೂಜ್ಯ **ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿ**ಯವರು ಸಂಕಲ್ಪಿಸಿರುತ್ತಾರೆ. ಈ ಮೇಲಿನ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ವೇ॥ಬ್ರ॥ ಶ್ರೀ ಗಜಾನನ ಭಟ್ಟ, ಹಿರೇ ಹಾಗೂ ವೇ॥ಬ್ರ॥ ಶ್ರೀ ಗಣಪತಿ ಭಟ್ಟ, ಹಿರೇ, ಗೋಕರ್ಣ (ಶ್ರೀಕ್ಷೇತ್ರದ ತಾಂತ್ರಿಕರು) ಇವರ ನೇತೃತ್ವ ಹಾಗೂ ಶ್ರೀ ಪ್ರಸನ್ನ ಗೋಪಾಲಕೃಷ್ಣ ಪಂಡಿತ ಇವರ ಆಚಾರ್ಯತ್ವದಲ್ಲಿ ನಡೆಯುವುದು. ಈ ಮಹಾನುಷ್ಠಾನಕ್ಕೆ ಸಮಸ್ತ ಭಕ್ತಾದಿಗಳು ತಮ್ಮ ಸಕುಟುಂಬ ಸಮೇತರಾಗಿ ಬಂದು ತಮ್ಮ ಕ್ಷೇಮ, ಅಭ್ಯುದಯಕ್ಕಾಗಿ ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸೇವೆಗೈದು ತೀರ್ಥ – ಪ್ರಸಾದ ಸ್ವೀಕರಿಸಿ ಅನ್ನ ಸಂತರ್ಪಣೆಗಳಲ್ಲಿ ಪಾಲ್ಗೊಂಡು ಶ್ರೀ ವೀರಾಂಜನೇಯ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.



**ಅಧ್ಯಕ್ಷರು / ಸರ್ವಸದಸ್ಯರು**
**ಉತ್ಸವ ನಿರ್ವಹಣಾ ಸಮಿತಿ.**

# ಉತ್ಸವದ ಸುಸಂದರ್ಭದಲ್ಲಿ ದೇವರಿಗೆ ಪ್ರಿಯವಾದ ಹಲವಾರು ಸೇವೆಗಳನ್ನು ಮಾಡಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

| | |
|---|---|
| ಉದಯಾಸ್ತಮಾನ ಸೇವೆ (ಸತತ 7 ದಿನ ಶ್ರೀ ರಾಮನವಮಿಯಿಂದ ಹನುಮಜಯಂತಿಯವರೆಗೆ) | 15,001/– |
| ಪುಷ್ಪರಥೋತ್ಸವ | 10,001/– |
| ಭಜನಾ ಸೇವೆ | 5,001/– |
| ಉದಯಾಸ್ತಮಾನ ಸೇವೆ (1 ದಿನಕ್ಕೆ) | 3,001/– |
| ಪಲ್ಲಕ್ಕಿ ಸೇವೆ | 3,001/– |
| ಶತರುದ್ರ ಪಾರಾಯಣ | 3,001/– |
| ರಾಮತಾರಕ ಹವನ | 2,001/– |
| ಆಂಜನೇಯ ಮೂಲಮಂತ್ರ ಹವನ | 2,001/– |
| ಸರ್ವ ಸೇವೆ | 1,001/– |
| ಅನ್ನದಾಸೋಹ | 1,001/– |
| ಸುಂದರಕಾಂಡ ಪಾರಾಯಣ | 1,001/– |
| ಬ್ರಹ್ಮರಥೋತ್ಸವದಂದು ವಿಶೇಷ ಪೂಜೆ | 501/– |
| ಏಕಾದಶ ರುದ್ರ ಪಾರಾಯಣ | 251/– |
| ಸತ್ಯಮಾರುತಿ ವ್ರತ | 201/– |





# ಕಾರ್ಯಕ್ರಮಗಳ ವಿವರ

**ಚೈತ್ರ ಶುದ್ಧ ದ್ವಿತೀಯಾ/ತೃತೀಯಾ, ಸೋಮವಾರ, ತಾ: 31–03–2025**

**ಬೆಳಿಗ್ಗೆ –** ಬ್ರಹ್ಮಕೂರ್ಚಹವನ, ಪ್ರಾರ್ಥನೆ, ಮಹಾಸಂಕಲ್ಪ, ಗಣೇಶಪೂಜಾ, ಪುಣ್ಯಾಹ, ನಾಂದೀ, ಕೌತುಕಪೂಜಾ, ಕೃಚ್ಛ್ರಾಚರಣ, ಋತ್ವಿಗ್ವರಣ, ಮಧುಪರ್ಕ, ಕೌತುಕಬಂಧನ, ಅಷ್ಟಮೂರ್ತಿಪ್ರಾರ್ಥನಾ, ದೇವಾಲಯ ಪರಿಗ್ರಹ, ಅಕ್ಷತಹವನ, ಬಿಂಬಶುದ್ಧಿ ಕಲಶಸ್ಥಾಪನೆ, ಜಲಾಧಿವಾಸ.

- ಗಾಯತ್ರೀ ಹವನ
- ಗಣಪತಿ ಅಥರ್ವಶೀರ್ಷ ಹವನ

**ಸಾಯಂಕಾಲ –** ಯಾಗಶಾಲಾಪ್ರವೇಶ, ಸ್ಥಾನಶುದ್ಧಿ, ಪ್ರಾಸಾದ ಶುದ್ಧಿ, ಉದಕಶಾಂತಿ/ರಾಕ್ಷೋಘ್ನ ಪಾರಾಯಣ, ಮಂಡಪ ಸಂಸ್ಕಾರ, ಮಂಡಲ ದರ್ಶನ, ರಾಕ್ಷೋಘ್ನ/ವಾಸ್ತುಶಾಂತಿ, ಕುಂಭೇಶಕಲಶ ಸ್ಥಾಪನೆ, ವಾಸ್ತುಬಲಿ, ಬಿಂಬಶುದ್ಧಿಕಲಶ ಸ್ನಪನ, ಧಾನ್ಯಾಧಿವಾಸ ಇತ್ಯಾದಿ. ಮೃತ್ತಿಕಾಹರಣ, ಬೀಜಾವಾಪ.

**ಚೈತ್ರ ಶುದ್ಧ ಚತುರ್ಥಿ, ಮಂಗಳವಾರ, ತಾ: 01–04–2025**

**ಬೆಳಿಗ್ಗೆ –** ಗಣೇಶಪೂಜಾ, ಪುಣ್ಯಾಹ, ಕಲಶಪೂಜಾ, ಪುಷ್ಪಾಧಿವಾಸ ಅಗ್ನಿಜನನ, ಅಗ್ನಿಸಂಸ್ಕಾರಹವನಗಳು, ಪೂಜಾಹವನ, ಸ್ಥಾನಶುದ್ಧಿ ಹವನ, ಬಿಂಬಶುದ್ಧಿ ಹವನ, ನವಗ್ರಹಹವನ, ಮೃತ್ಯುಂಜಯಹವನ, ಜಲಾಧಿವಾಸ, ಪುಷ್ಪಾಧಿವಾಸ ಹವನಗಳು

– ಶತಚಂಡೀ ಹವನ

**ಸಾಯಂಕಾಲ –** ರತ್ನ–ಫಲ–ವಸ್ತ್ರಾಧಿವಾಸಗಳು ಹಾಗೂ ಹವನಗಳು, ಅಸ್ತ್ರಜಪ, ಮೂಲಮಂತ್ರಜಪ, ಬಾಲಾಲಯ ಸಂಕೋಚ, ಇತ್ಯಾದಿ.

**ಚೈತ್ರ ಶುದ್ಧ ಪಂಚಮಿ, ಬುಧವಾರ, ತಾ: 02–04–2025**

**ಬೆಳಿಗ್ಗೆ –** ಗಣೇಶಪೂಜಾ, ಪುಣ್ಯಾಹ, ಕಲಶಪೂಜಾ, ಪ್ರತಿಷ್ಠಾ ಪೂರ್ವಾಂಗ ಹವನಗಳು, ಮಹಾಶಾಂತಿ, ಮಹಾಪ್ರಾಯಶ್ಚಿತ್ತ ಹವನಗಳು ಇತ್ಯಾದಿ.

– ಪುರುಷ ಸೂಕ್ತಾತ್ಮಕ ಅತಿವಿಷ್ಣು ಹವನ

**ಸಾಯಂಕಾಲ –** ಶಯ್ಯಾಧಿವಾಸ, ಷಡಧ್ವನ್ಯಾಸ, ಧಾನ್ಯಾಧಿವಾಸ, ತತ್ತ್ವಹವನ, ಪ್ರತಿಷ್ಠಾಹವನ, ಅಧಿವಾಸ ಹವನ, ಶಾಂತಿಹವನ, ಪೀಠಾಧಿವಾಸ ಹವನ, ನಪುಂಸಕ ಶಿಲಾಹವನ, ಪ್ರಾಸಾದಾಧಿವಾಸ ಹವನ, ರತ್ನನ್ಯಾಸ ಹವನ, ಅಷ್ಟಬಂಧಹವನ, ಗೋದೋಹನ, ಪೂಜಾಹವನ, ಬ್ರಾಹ್ಮಣ ಭೋಜನ, ಪಾಯಸಬಲಿ. ಪುರಾಣ, ನೃತ್ತ, ಗೀತ, ವಾದ್ಯ, ಭಜನೆ.

**ಚೈತ್ರ ಶುದ್ಧ ಷಷ್ಠಿ, ಗುರುವಾರ, ತಾ: 03–04–2025**

**ಬೆಳಿಗ್ಗೆ –** ಗಣೇಶಪೂಜಾ, ಪುಣ್ಯಾಹ, ಕಲಶ ಪೂಜಾ, ಮಹಾರುದ್ರಹವನ,

ವೃಷಭ ಲಗ್ನದ ಶುಭ ಮುಹೂರ್ತದಲ್ಲಿ ಶ್ರೀಗಣಪತಿ ಪ್ರತಿಷ್ಠಾ, ಶ್ರೀ ವೀರಾಂಜನೇಯ ಪ್ರತಿಷ್ಠಾ, ಶಿಖರ ಪ್ರತಿಷ್ಠಾ, ನಾಗ ಸುಬ್ರಹ್ಮಣ್ಯ ಪ್ರತಿಷ್ಠಾ, ಚೌಡೇಶ್ವರಿ ಪ್ರತಿಷ್ಠಾ, ಜೀವಕಲಶಾಭಿಷೇಕ, ಶಕ್ತಿ, ಕಲಾ, ಪ್ರಾಣಪ್ರತಿಷ್ಠಾ ಹವನಗಳು, ಪೂರ್ಣಾಹುತಿ, ಪ್ರತಿಷ್ಠಾಂಗ ಕಲಶಾಭಿಷೇಕ ಇತ್ಯಾದಿ. ಗಣೇಶಪೂಜಾ, ಪುಣ್ಯಾಹ, ಧ್ವಜಹವನ, ಧ್ವಜಾರೋಹಣ, ಧ್ವಜಬಲಿ.

**ಸಾಯಂಕಾಲ –** ಸಪ್ತಶುದ್ಧಿ, ರಾಕ್ಷೋಘ್ನವಾಸ್ತು ಶಾಂತಿ, ಮಂಡಪಸಂಸ್ಕಾರ, ಕಲಶ ಸ್ಥಾಪನೆ, ವಾಸ್ತುಬಲಿ, ಮುಹೂರ್ತಬಲಿ.

# ಕಾರ್ಯಕ್ರಮಗಳ ವಿವರ

**ಚೈತ್ರ ಶುದ್ಧ ಸಪ್ತಮಿ, ಶುಕ್ರವಾರ, ತಾ: 04–04–2025**
**ಬೆಳಿಗ್ಗೆ** – ಪ್ರಾತರ್ಬಲಿ, ಗಣೇಶಪೂಜಾ, ಪುಣ್ಯಾಹ, ಪೂಜಾ, ಅಧಿವಾಸ ಹವನಗಳು, ಮಧ್ಯಾಹ್ನ ಬಲಿ.
**ಸಾಯಂಕಾಲ** – ಉತ್ಸವ, ಗುಪ್ತಹವನ, ರಾತ್ರಿಬಲಿ, ಭೂತಬಲಿ, ಪುಷ್ಪರಥೋತ್ಸವ, ಶಯನೋತ್ಸವ. ಸಹಸ್ರ ಬ್ರಹ್ಮಕಲಶಸ್ಥಾಪನೆ, ಸ್ನಪನ ಹವನ.


**ಚೈತ್ರ ಶುದ್ಧ ಅಷ್ಟಮಿ, ಶನಿವಾರ, ತಾ: 05–04–2025**
**ಬೆಳಿಗ್ಗೆ** – ಪ್ರಾತರ್ಬಲಿ, ಗಣೇಶಪೂಜಾ, ಪುಣ್ಯಾಹ, ಬ್ರಹ್ಮಕಲಶಾಭಿಷೇಕ, ಅಧಿವಾಸಹವನ, ರಥಶುದ್ಧಿಹವನ, ರಥಶುದ್ಧಿ, ಮಹಾಪೂಜೆ, ಮಧ್ಯಾಹ್ನ ಬಲಿ, ದಂಡಬಲಿ, ರಥಬಲಿ, ರಥಾರೋಹಣ ಇತ್ಯಾದಿ.
**ಸಾಯಂಕಾಲ** – ರಥೋತ್ಸವ. ಗ್ರಾಮಬಲಿ, ಮೃಗಬೇಟೆ,
**ರಾತ್ರಿ** – ಬಲಿ.

**ಚೈತ್ರ ಶುದ್ಧ ನವಮಿ, ರವಿವಾರ, ತಾ: 06–04–2025**
ಅವಭೃತಾಂಗಸ್ನಾನ, ಕಲಶಾಭಿಷೇಕ, ಅಂಕುರ ಸಮರ್ಪಣೆ.
**ಬೆಳಿಗ್ಗೆ** – ಗಣೇಶ ಪೂಜೆ, ದೇವತಾ ಪ್ರಾರ್ಥನೆ, ಪುಣ್ಯಾಹ ವಾಚನೆ, ನಾಂದಿ, ಕೌತುಕ ಪೂಜನ, 28 ಫಲದ ಗಣಹವನ, ವನವಾಸೀ ಶ್ರೀ ಸೀತಾರಾಮಚಂದ್ರ ದೇವರ ವಾರ್ಷಿಕ ವರ್ಧಂತಿ, ರಾಮತಾರಕ ಹವನ, ಆಂಜನೇಯ ಮೂಲಮಂತ್ರ ಹವನ, ಮಹಾರುದ್ರಾನುಷ್ಠಾನ ಆರಂಭ.

**ಚೈತ್ರ ಶುದ್ಧ ದಶಮಿ,**
**ಸೋಮವಾರ, ತಾ: 07–04–2025**
**ಬೆಳಿಗ್ಗೆ** – ಶರಾವತಿ ಕುಂಭಸ್ನಾನ ಆರಂಭ ಯಾಮ ಪೂಜೆ ಆರಂಭ. ವನವಾಸಿ ಶ್ರೀ ಸೀತಾರಾಮಚಂದ್ರ ದೇವರ ಸನ್ನಿಧಿಯಲ್ಲಿ ಪಂಚಾಕ್ಷರೀ ಹವನ,
**ಸಂಜೆ** – **ಶರಾವತಿ ಆರತಿ** – 06:30 ಕನ್ಯಾಲಗ್ನ

**ಚೈತ್ರ ಶುದ್ಧ ಏಕಾದಶಿ, ಮಂಗಳವಾರ, ತಾ: 08–04–2025**
– ಮೃತ್ಯುಂಜಯ ಹವನ

# ಕಾರ್ಯಕ್ರಮಗಳ ವಿವರ



**ಚೈತ್ರ ಶುದ್ಧ ದ್ವಾದಶಿ, ಬುಧವಾರ, ತಾ: 09–04–2025**
–ಶ್ರೀ ಸೂಕ್ತ, ಪುರುಷ ಸೂಕ್ತ ಹವನ

**ಚೈತ್ರ ಶುದ್ಧ ತ್ರಯೋದಶಿ, ಗುರುವಾರ, ತಾ: 10–04–2025**
**ಬೆಳಿಗ್ಗೆ –** ಶರಾವತಿ ಕುಂಭ ಸ್ನಾನ ಮುಕ್ತಾಯ.
– ಶ್ರೀ ದೇವರ ರಥೋತ್ಸವಾಂಗ ಧ್ವಜಾರೋಹಣಾದಿ ಧಾರ್ಮಿಕ ಕಾರ್ಯಕ್ರಮಗಳ ಆರಂಭ.

**ಚೈತ್ರ ಶುದ್ಧ ಚತುರ್ದಶಿ, ಶುಕ್ರವಾರ, ತಾ: 11–04–2025**
– ಶ್ರೀ ದೇವರ ಪುಷ್ಪರಥೋತ್ಸವ

**ಚೈತ್ರ ಶುದ್ಧ ಹುಣ್ಣಿಮೆ, ಶನಿವಾರ, ತಾ: 12–04–2025**
**ಬೆಳಿಗ್ಗೆ –** ರಾಮತಾರಕ ಹವನ, ಆಂಜನೇಯ ಮೂಲಮಂತ್ರ ಹವನ, ಮಹಾರುದ್ರ ಹವನದ ಪೂರ್ಣಾಹುತಿ.
– ಶ್ರೀ ದೇವರ ಮಹಾಸ್ಯಂದನ ಬ್ರಹ್ಮರಥೋತ್ಸವ.

**ಚೈತ್ರ ಬಹುಳ ಪಾಡ್ಯ, ರವಿವಾರ, ತಾ: 13–04–2025**
– ಅವಭೃತಾಂಗ ಸ್ನಾನ, ಕಲಶಾಭಿಷೇಕ,
ಅಂಕುರ ಸಮರ್ಪಣೆ.

**ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ 2025**
ದಿನಾಂಕ 06–04–2025 ರಿಂದ 12–04–2025ರ ವರೆಗೆ
– ಪ್ರತಿದಿನ ಮಧ್ಯಾಹ್ನ 03:30 ರಿಂದ ಸಭಾ ಕಾರ್ಯಕ್ರಮ ಹಾಗೂ
– ಸಾಯಂಕಾಲ 06:00 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

# ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ

ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದ ನಾಡಿನಲ್ಲಿ ಇಂದು ಕಾರಣಾಂತರಗಳಿಂದ ಕಣ್ಮರೆಯಾಗುತ್ತಿರುವ ಸಾಂಸ್ಕೃತಿಕ ಕಲೆಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಮಹತ್ತರವಾದ ಉದ್ದೇಶದಿಂದ ಹಮ್ಮಿಕೊಂಡ ಸಾಂಸ್ಕೃತಿಕ ಹಬ್ಬ "ಮಲೆನಾಡ ಉತ್ಸವ". ಈ ಹಬ್ಬವು 2008 ರಿಂದ ಇಲ್ಲಿಯವರೆಗೆ ಅವಿರತವಾಗಿ ಬೆಳೆದುಕೊಂಡು ಬರುತ್ತಾ 2016 ರಿಂದ "ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ" ಎಂಬ ಹೆಸರಿನಲ್ಲಿ ವಿಜೃಂಭಣೆಯ ಜಾನಪದ ಸಂಗಮವಾಗಿ ಹೊರಹೊಮ್ಮಿದೆ.

ಸಂಸ್ಕೃತಿ ಕುಂಭ – ಮಲೆನಾಡ ಉತ್ಸವ 2025 ದಿನಾಂಕ 06–04–2025 ರಿಂದ 12–04–2025ರ ವರೆಗೆ ಆಯೋಜನೆಗೊಂಡಿದ್ದು ಪ್ರತಿದಿನ ಮಧ್ಯಾಹ್ನ 03:30 ರಿಂದ ಸಭಾ ಕಾರ್ಯಕ್ರಮ ಹಾಗೂ ಸಾಯಂಕಾಲ 06:00 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಲಿದೆ.

## ಹವನಗಳು:

- ಮೃತ್ಯುಂಜಯ ಹವನ
- ಸುದರ್ಶನ ಹವನ
- ಧನ್ವಂತರೀ ಹವನ
- ಪಂಚಾಕ್ಷರೀ ಹವನ
- ಶ್ರೀಸೂಕ್ತ ಪುರುಷಸೂಕ್ತ ಹವನ.

## ಶರಾವತಿ ಕುಂಭ:

ಭಾರತವು ಅನೇಕ ಪುಣ್ಯನದಿಗಳ ತವರಾಗಿದೆ. ಎಲ್ಲಾ ನದಿ ಸಂಗಮಗಳೂ ಗಂಗೆಯಂತೆ ಪವಿತ್ರವಾಗಿದೆ. ಜೀವ ಜಂತುಗಳ ಒಡನಾಡಿಯಾಗಿ ಪ್ರತಿ ಜೀವ–ಸಸ್ಯ–ಪ್ರಾಣಿ ಸಂಕುಲಗಳಿಗೆ ಜೀವನವಾಗಿರುವ ಎಲ್ಲಾ ನದಿಗಳೂ ಪುಣ್ಯತಮವೇ ಆಗಿದೆ. ಅಂತ ಶ್ರೇಷ್ಠತಮವಾದ ನದಿಗಳಲ್ಲಿ ಒಂದಾದ ಶರಾವತಿಯಲ್ಲಿ ಮಿಂದೆದ್ದು ಪಾಪ ಕಳೆದು ಕೊಳ್ಳುವ ಕಾಲವೇ "ಶರಾವತಿ ಕುಂಭ". ಇಂತಹ ಪಾಪ ನಿವಾರಿಣಿಯಾದ ಶರಾವತಿಗೆ ನಮ್ಮ ಕೃತಜ್ಞತಾ ಭಾವ ಸಮರ್ಪಣೆಯ ಸತ್ಕಾರ್ಯವೇ "ಶರಾವತಿ ಆರತಿ".

## ಶರಾವತಿ ಕುಂಭಮೇಳದ ಪುಣ್ಯ ಸಮಯದಲ್ಲಿನ ಸೇವೆಗಳು

ಸೇವೆಗಳು:

| | |
|---|---|
| ಒಂದು ಯಾಮ ಪೂಜೆ | 3,001/– |
| ಹವನ (ಯಾವುದೇ ಒಂದು ಹವನಕ್ಕೆ) | 2,001/– |
| ಒಂದು ಯಾಮಕ್ಕೆ | 1,001/– |
| ಗಂಗಾಭಿಷೇಕ (1ಕ್ಕೆ) | 201/– |

ಪುಣ್ಯಸ್ನಾನಕ್ಕೆ ಎಲ್ಲರಿಗೂ ಮುಕ್ತ ಅವಕಾಶವಿದ್ದು, ಪ್ರತಿಯೊಬ್ಬರು ಭಾಗವಹಿಸಿ ಕೃತಾರ್ಥರಾಗಬೇಕೆಂಬುದು ನಮ್ಮ ಅಭಿಲಾಷೆ.



# ಪುಣ್ಯಸ್ನಾನದ ಸಮಯ

| ದಿನಾಂಕ | ಬೆಳಿಗ್ಗೆ | ಮಧ್ಯಾಹ್ನ | ಸಾಯಂಕಾಲ |
|---|---|---|---|
| 07–04–2025 | 04:50 ಕುಂಭ ಲಗ್ನ | 12:05 ಮಿಥುನ ಲಗ್ನ | 06:15 ಕನ್ಯಾ ಲಗ್ನ |
| 08–04–2025 | 04:50 ಕುಂಭ ಲಗ್ನ | 12:05 ಮಿಥುನ ಲಗ್ನ | 06:15 ಕನ್ಯಾ ಲಗ್ನ |
| 09–04–2025 | 04:50 ಕುಂಭ ಲಗ್ನ | 12:05 ಮಿಥುನ ಲಗ್ನ | 06:15 ಕನ್ಯಾ ಲಗ್ನ |
| 10–04–2025 | 04:50 ಕುಂಭ ಲಗ್ನ | | |

ಶ್ರೀ ವೀರಾಂಜನೇಯನೇ ಸರ್ವ ಭಕ್ತರಿಗಾಗಿ ನಿಮಂತ್ರಿಸಿದ ಈ ನಿರೂಪವನ್ನು ಸ್ವೀಕರಿಸಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿಯವರ ಸಂಕಲ್ಪಕ್ಕೆ ಕೈ ಜೋಡಿಸಿ ಈ ಮಹೋತ್ಸವದಲ್ಲಿ ಸೇವೆ, ಭಜನೆ, ಹೋಮ, ಹವನಗಳಲ್ಲಿ ಭಾಗಿಯಾಗಿ ತನು–ಮನ–ಧನಗಳಿಂದ ಸೇವೆಗೈದು ನಮ್ಮ ಮನೆಯ ದೇವರ ಉತ್ಸವ ಎಂಬ ಭಾವದಲ್ಲಿ ಭಾಗಿಯಾಗಿ ಕೃತಾರ್ಥರಾಗೋಣ.

## ವಿಶೇಷ ಸೂಚನೆ

- ಉತ್ಸವದ ದಿನಗಳಲ್ಲಿ ನಡೆಯುವ ಸೇವೆಗಳಲ್ಲಿ ಹಾಗೂ ಪ್ರತ್ಯೇಕವಾಗಿ ಪಾರಾಯಣ, ಹವನಗಳಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳು ಮುಂಚಿತವಾಗಿ ಹೆಸರು ನೊಂದಾಯಿಸಿಕೊಳ್ಳಬೇಕು.
- ಶ್ರೀ ದೇವರಿಗೆ ಅಕ್ಕಿ, ಬೆಲ್ಲ, ತುಪ್ಪ, ಎಣ್ಣೆ, ತರಕಾರಿ, ವಸ್ತ್ರ, ಧವಸ–ಧಾನ್ಯ ಇತ್ಯಾದಿ ಸುವಸ್ತುಗಳನ್ನು ನೀಡಬಯಸುವವರು ದೇವಸ್ಥಾನಕ್ಕೆ ಅರ್ಪಿಸಿ ಪಾವತಿ ಪಡೆಯಬೇಕು.
- 'ಸತ್ಯಮಾರುತಿ ವೃತ' ಮಾಡಬಯಸುವವರು ದಿನಾಂಕ 10–04–2025ರ ಒಳಗಾಗಿ ಹೆಸರನ್ನು ನೊಂದಾಯಿಸಿಕೊಳ್ಳಬೇಕು.
- 'ಹೊರೆಕಾಣಿಕೆ ಸೇವೆ' ನೀಡಬಯಸುವವರು 2025 ಏಪ್ರಿಲ್ 02, 04 ಹಾಗೂ 11 ರಂದು ನೀಡಬಹುದು.
- ಉತ್ಸವದ ಕಾರ್ಯಕ್ರಮಗಳಿಗೆ ಧನ ಸಹಾಯ ಮಾಡಲಿಚ್ಛಿಸುವವರು ಅಥವಾ ವಿವಿಧ ಸೇವೆಗಳಲ್ಲಿ ಪಾಲ್ಗೊಳ್ಳುವವರು ಎಮ್.ಓ. ಮಾಡಬಹುದು, ಡಿ.ಡಿ. /ಆರ್.ಟಿ.ಜಿ.ಎಸ್ / ನೆಫ್ಟ್‌ಗಳ /ಕ್ಯೂ–ಆರ್ ಕೋಡ್ ಮುಖಾಂತರ ಕೆಳಗೆ ನೀಡಿದ ಬ್ಯಾಂಕ್ ಖಾತೆಗೆ ಸಂದಾಯ ಮಾಡಬಹುದು.
- ನಿಮ್ಮ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80G ಅಡಿಯಲ್ಲಿ ವಿನಾಯತಿ ಸಿಗುತ್ತದೆ.
- ಪ್ರತಿಯೊಂದು ಸೇವೆಗೂ ಸೇವಾ ಕಛೇರಿಯಲ್ಲಿ ಸೇವಾ ರಶೀದಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕಾಗಿ ವಿನಂತಿ.



## ದೇವಸ್ಥಾನದ ಬ್ಯಾಂಕ್ ಖಾತೆಯ ವಿವರ

**Shri Veeranjaneya Religious & Charitable Trust (R.)**
**Ac/No.: 920010008707398**
**IFSC Code : UTIB0003994**
**Axis Bank, Honavar Branch**

# ಸರ್ವರಿಗೂ ಆದರದ ಸ್ವಾಗತ

ತಮ್ಮೆಲ್ಲರ ಆಗಮನದ ನಿರೀಕ್ಷೆಯಲ್ಲಿ .....

ಅಧ್ಯಕ್ಷರು ಹಾಗೂ ಸರ್ವಸದಸ್ಯರು, ಉತ್ಸವ ನಿರ್ವಹಣಾ ಸಮಿತಿ.
ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಹೇಮಪುರ ಮಹಾಪೀಠಮ್.
ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ (ರಿ.)
ಶ್ರೀ ಕ್ಷೇತ್ರ ಬಂಗಾರಮಕ್ಕಿ.
ಹಾಗೂ ಸಮಸ್ತ ಊರ ನಾಗರಿಕರು.

ಸಂಪರ್ಕ ಸಂಖ್ಯೆ : 6361011288, 7019342699, 9449109299, 9380643455, 9353488533

bangaramakki@gmail.com
www.bangaramakki.org
www.fecebook.com/Hemapura
www.youtube.com/c/Hemapura
shri_kshetra_bangaramakki/

Location: